25

# ಅನ್ಯರ ಮಧ್ಯದಲ್ಲಿ ಪೌಲನ ಮಿಶನರಿ ಪ್ರಯಾಣಗಳು

## ಕ್ರಿ.ಶ. 45-58 (ಅಪೊಸ್ತಲರ ಕೃತ್ಯಗಳು 13-21:26)

### I. ಮೊದಲನೆಯ ಪ್ರಯಾಣ.

**(ಅಪೊಸ್ತಲರ ಕೃತ್ಯಗಳು 13; 14.)**

**1. ಮಿಶನರಿ ಪ್ರೇರೇಪಣೆ.**-ಒಂದು ವರ್ಷದವರೆಗೆ ಬಾರ್ನಬನು ಮತ್ತು ಸೌಲನು ಅಂತಿಯೋಕ್ಯದಲ್ಲಿ ಒಂದಾಗಿ ಸೇವೆಮಾಡಿದರು. ಸಭೆಯು ಸಂಖ್ಯೆಯಲ್ಲಿ, ಮತ್ತು ಮಹತ್ವದ್ದಾಗಿ, ಆತ್ಮಿಕತೆಯಲ್ಲಿ ಬಹಳವಾಗಿ ಬೆಳೆದಿತ್ತು. ಕೊರತೆಯಲ್ಲಿದ್ದ ಮತ್ತು ಯೆಹೂದಿ ಸಹೋದರರಿಗಾಗಿ ಕೊಡುಗೆಯೊಂದಿಗೆ ಬಾರ್ನಬ ಮತ್ತು ಸೌಲರನ್ನು ಯೆರೂಸಲೇಮಿಗೆ ಕಳುಹಿಸಿದ್ದರಲ್ಲಿ ಅವರ ಉದಾರತೆಯು ತೋರಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 11:27-30), ಅದಕ್ಕೆ ಬೋಧಕರು ಅನೇಕರಿದ್ದರು (ಅಪೊಸ್ತಲರ ಕೃತ್ಯಗಳು 13:1) ಅವರಲ್ಲಿ ಬಾರ್ನಬನು ಮೊದಲನೆಯವನಾಗಿಯೂ ಸೌಲನು ಕೊನೆಯವನಾಗಿಯೂ ಹೆಸರಿಸಲ್ಪಟ್ಟಿದ್ದಾರೆ. ವಿಶಾಲವಾದ ಸುವಾರ್ತಾಸೇವೆಯ ಕಾರ್ಯವು ಅವರ ಹೃದಯಗಳ ಮೇಲೆ ಇದ್ದಂತೆ ತೋರುತ್ತದೆ; ಯಾಕಂದರೆ, "ಅವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪರಿಶುದ್ಧಾತ್ಮನು - ನಾನು ಬರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು."[1] ಹಿಂಸೆಯ ಬಾಹ್ಯ ಒತ್ತಡದಿಂದ ಯೆರೂಸಲೇಮು ಮಿಶನರಿ ಕೇಂದ್ರವಾಯಿತು; ಅಂತಿಯೋಕ್ಯವು ಪರಿಶುದ್ಧಾತ್ಮನ ಆತ್ಮಿಕ ಒತ್ತಡದಿಂದ ಆಯಿತು.

**2. ಕುಪ್ರದ್ವೀಪಕ್ಕೆ ಸಂದರ್ಶನ.**-ಆಯ್ದುಕೊಂಡ ಮೊದಲನೆಯ ಕ್ಷೇತ್ರವು ಮುಖ್ಯ ಭೂಮಿಯಿಂದ ಕಾಣುತ್ತಿದ್ದ ಕುಪ್ರದ್ವೀಪವಾಗಿತ್ತು. ಅದು ಬಾರ್ನಬನ ಹುಟ್ಟೂರಾಗಿತ್ತು, ಅವರೊಂದಿಗೆ ಯೆರೂಸಲೇಮಿನಿಂದ ಹಿಂದಿರುಗಿ ಬಂದಿದ್ದ ಯೋಹಾನ ಮಾರ್ಕನು (ಅಪೊಸ್ತಲರ ಕೃತ್ಯಗಳು 12:25), ಮಿಶನರಿಗಳೊಂದಿಗೆ ಜತೆಗೂಡಿದನು, ನಡುಗಡ್ಡೆಯ ಪೂರ್ವದಲ್ಲಿದ್ದ ಹಳೇ ಗ್ರೀಕ್ ರಾಜಧಾನಿಯಾದ ಸಲಾಮೀಸ್‌ನಲ್ಲಿ ಪ್ರಸಂಗಿಸಿ, ಅವರು ಪಶ್ಚಿಮದ ಅಂತ್ಯದಲ್ಲಿದ್ದ ರೋಮನ್ ಪಟ್ಟಣ ಪಾಫೋಸಿಗೆ ಬಂದರು. ಇಲ್ಲಿ ರೋಮನ್ ಗವರ್ನರ ಸೆರ್ಗಸ್ ಪೌಲನು ಒಬ್ಬ ವಿಶ್ವಾಸಿಯಾದನು. ಅವನು ಮಾರ್ಪಾಟವಾದದ್ದು ಬಾರ್ - ಯೇಸು ಎಂಬ ಹೆಸರಿನ ಒಬ್ಬ ಯೆಹೂದಿ ಮಂತ್ರವಾದಿಯಿಂದ ವಿರೋಧಿಸಲ್ಪಟ್ಟಿತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸೌಲನು ಮುಂದಾಳುತನ ವಹಿಸಿದನು, ದೈವಿಕ ಪ್ರೇರೇಪಣೆಯ ಮತ್ತು ಅಪೊಸ್ತೊಲಿಕ ಬಲದ ಅರುಹುವುಳ್ಳವನಾಗಿ, ವಿರೋಧಿಸುತ್ತಿದ್ದವನನ್ನು ಗದರಿಸಿದನು. ಅವನ ಕಪಟತನದ ಮೇಲೆ ಕುರುಡುತನವು ದೈವಿಕ ನ್ಯಾಯತೀರ್ಪಿನಂತೆ ತಕ್ಷಣವೇ ಬರುವುದೆಂದು ಹೇಳಿದನು. ಈ ಸಮಯದಿಂದ ಸೌಲನು ಪೌಲನೆಂದು ಕರೆಯಲ್ಪಟ್ಟನು, ಮತ್ತು ಸ್ವೀಕೃತ ನಾಯಕನಾದನು.

**3. ಚಿಕ್ಕ ಆಸಿಯಾದಲ್ಲಿ ಪ್ರಯಾಣ.**-ಅನಂತರ ಮಿಶನರಿಗಳು ಚಿಕ್ಕ ಆಶಿಯಾದ ಕಡೆಗೆ ತಮ್ಮ ಮುಖಗಳನ್ನು ತಿರುಗಿಸಿದರು. ಅನೇಕ ವರ್ಷಗಳವರೆಗೆ ಪೌಲನು ತನ್ನ ಸ್ವಂತ ಕಿಲಿಕ್ಯ ಪ್ರಾಂತ್ಯದಲ್ಲಿದ್ದನು. ಈಗ ಸಂದರ್ಶಿಸಿದ ಪ್ರಾಂತ್ಯಗಳು ಕಿಲಿಕ್ಯದ ಉತ್ತರಕ್ಕೂ ಪೂರ್ವಕ್ಕೂ ಇದ್ದವು, ಪೆರ್ಗದಲ್ಲಿ ಯೋಹಾನ ಮಾರ್ಕನು ಕೆಲಸವನ್ನು ತ್ಯಜಿಸಿ ಯೆರೂಸಲೇಮಿಗೆ ಹಿಂದಿರುಗಿದನು. ಪೌಲ ಮತ್ತು ಬಾರ್ನಬರು ಪರ್ವತಗಳ ಜಿಲ್ಲೆಗಳ ಮುಖಾಂತರ ಮುಂದುವರಿದರು. "ನದಿಗಳ ಅಪಾಯಗಳೂ ಕಳ್ಳರ ಅಪಾಯಗಳೂ ಪಟ್ಟಣದಲ್ಲಿ ಅಪಾಯಗಳೂ ಸ್ವಂತ ಜನರಿಂದ ಅಪಾಯಗಳೂ ಕಾಡಿನಲ್ಲಿ ಅಪಾಯಗಳೂ ಸಮುದ್ರದಲ್ಲಿ ಅಪಾಯಗಳೂ ಸಳ್ಳು ಸಹೋದರರೊಳಗೆ ಇರುವಾಗ ಅಪಾಯಗಳು ಬಂದವು" (2 ಕೊರಿಂಥ 11:26). ಪಿಸಿದ್ಯದ ಅಂತಿಯೋಕ್ಯ, ಇಕೋನಿಯಮ್, ಲುಸ್ತ್ರ ಮತ್ತು ದೆರ್ಬೆಗಳನ್ನು ಒಂದರ ನಂದರ ಒಂದನ್ನು ಸಂದರ್ಶಿಸಿ ಹಿಂದಿರುಗಿ ಬಂದರು. ಅಂತಿಯೋಕ್ಯದಲ್ಲಿ, ಪೌಲನು ಸಭಾಮಂದಿರದಲ್ಲಿ ತನ್ನ ಮೊದಲನೆಯ ವಿವರವಾದ ಪ್ರಸಂಗ ಮಾಡಿದನು. ಯೆಹೂದ್ಯರ ಗುಂಪಿನಿಂದ ತಿರಸ್ಕರಿಸಲ್ಪಟ್ಟು, ಅವನು ಅನ್ಯರ ಕಡೆಗೆ ತಿರುಗಿಕೊಂಡನು. "ಮೊದಲು ಯೆಹೂದ್ಯರಿಗೆ ಅನಂತರ ಗ್ರೀಕರಿಗೆ" (ರೋಮಾಪುರ 1:16), - ಇಂಥದ್ದು ಎಲ್ಲಾ ಕಡೆಗಳಲ್ಲಿಯೂ ಕ್ರಮವಾಗಿತ್ತು. ಪ್ರತಿಯೊಂದು ಕಡೆಯಲ್ಲಿಯೂ ಅವರ ಕಾರ್ಯವು ಮಾರ್ಪಡುವಿಕೆಗಳಲ್ಲಿ ಮತ್ತು ಶ್ರಮೆತಾಳುವುದರಲ್ಲಿ ವೃದ್ಧಿಗೊಂಡಿತ್ತು. ಲುಸ್ತ್ರದಲ್ಲಿ, ಪೌಲನು ಒಬ್ಬ ಕುಂಟನನ್ನು ಗುಣಪಡಿಸಿದನು. ಮೂಢ ನಂಬಿಕೆಯ ಅನ್ಯರಿಂದ ಮೊದಲು ಅವರು ದೇವರಂತೆ ಅರಾಧಿಸಲ್ಪಟ್ಟರು, ಮತ್ತು, ಆಮೇಲೆ ಇಕೋನಿಯಮ್‌ದ ಯೆಹೂದ್ಯರ ಪ್ರಚೋದನೆಯಿಂದ ಪೌಲನ ಮೇಲೆ ಕಲ್ಲೆಸೆದರು ಹಾಗೂ ಅವನು ಸತ್ತು ಹೋದನೆಂದು ತಿಳಿದು ಬಿಟ್ಟು ಹೋದರು. ಆನಂದದಿಂದ ತುಂಬಿದವನಾಗಿ ಅಂತಿಯೋಕ್ಯಕ್ಕೆ ಹಿಂದಿರುಗಿ ಬಂದು, ನೂತನ ಲೋಕವನ್ನು ಕಂಡುಕೊಂಡ ಸಂಶೋಧಕರಂತೆ, ತಮ್ಮನ್ನು ಕಳುಹಿಸಿಕೊಟ್ಟ ಸಭೆಗೆ ವರದಿಯನ್ನು ಕೊಡುತ್ತಾನೆ.

## II. ಎರಡನೆಯ ಪ್ರಯಾಣ.

## (ಅಪೊಸ್ತಲರ ಕೃತ್ಯಗಳು 16-18:22.)

**1. ಮಧ್ಯಂತರ; ಯೆರೂಸಲೇಮಿನಲ್ಲಿ ಕೂಟ.**-ಹೊಸ ಪರಿಸ್ಥಿತಿಗಳು ಹೊಸ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಸಭೆಯು ತನ್ನ ಯೆಹೂದಿ ಹಂತವನ್ನು ಬಿಟ್ಟು ಬಲವಾಗಿ ಬೆಳೆಯುತ್ತಲಿತ್ತು, ಆದರೆ ಯೆಹೂದಿ ಕ್ರೈಸ್ತರು ಸುವಾರ್ತೆಯ ಶ್ರೇಷ್ಠ ವಿಶ್ವವ್ಯಾಪಕತ್ವಕ್ಕೇರುವಲ್ಲಿ ನಿದಾನ ವಾಗಿತ್ತು. ಸುವಾರ್ತೆಗೆ ವಿಧೇಯತೆಯಿಂದ ಸಭೆಯೊಳಗೆ ಅನ್ಯಜನಾಂಗದವರು ಪ್ರವೇಶಿಸುವ ಸಮಸ್ಯೆಯು ಕೊರ್ನೇಲ್ಯನ ವಿಷಯದಿಂದ ಬಗೆಹರಿಸಲ್ಪಟ್ಟಿತು. ಆದರೆ ಅವರು ಸುನ್ನತಿಯನ್ನು ಹೊಂದಿ ಯೆಹೂದ್ಯರಾಗಬಾರದೋ? ಕ್ರೈಸ್ತತ್ವವು ಕೇವಲ ಯೆಹೂದಿ ಧರ್ಮದ ಒಂದು ಹೊಸ ಮತ್ತು ಪರಿಷ್ಕೃತ ಅವೃತ್ತಿಯಾಗಿರುವದಿಲ್ಲವೇ? ಹೀಗೆ ವಾದಿಸುತ್ತ ಕೆಲವರು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದರು. ಪ್ರಶ್ನೆಯು ಕಠಿಣವಾದದ್ದಾಗಿತ್ತು; ಅದು ಅಂತಿಯೋಕ್ಯದಲ್ಲಿಯ ಸಭೆಯ ಸಮಾಧಾನವನ್ನು ಭಯಪಡಿಸಿತು, ಮತ್ತು ಮಿಶನರಿಗಳ ಭವಿಷ್ಯದ ಸೇವೆಯ ಬಗ್ಗೆ ಚಿಂತನೆ ಹುಟ್ಟಿಸಿತು, ಆದುದರಿಂದ ಪೌಲ ಮತ್ತು ಬಾರ್ನಬನು ಪ್ರಶ್ನೆಯೊಂದಿಗೆ ಯೆರೂಸಲೇಮಿಗೆ ಕಳುಹಿಸಲ್ಪಟ್ಟರು. ಯಾಕೋಬನು ಅಧ್ಯಕ್ಷಸ್ಥಾನ ವಹಿಸಿದ, ಪೌಲ ಹಾಗೂ ಬಾರ್ನಬರು ಭಾಗವಹಿಸಿದ ಒಂದು ಕೂಟದಲ್ಲಿ ಸ್ವಾತಂತ್ರ್ಯದ ಪರವಾಗಿ ಪ್ರಶ್ನೆಯು ನಿರ್ಣಯಿಸಲ್ಪಟ್ಟಿತು, ಅದಕ್ಕೆ ವ್ಯತಿರಿಕ್ತವಾಗಿ

ತೀರ್ಮಾನಿಸಲ್ಪಟ್ಟಿದ್ದರೆ, ಕ್ರೈಸ್ತತ್ವವು ತನ್ನ ತೊಟ್ಟಿಲಲ್ಲಿಯೇ ನಾಶವಾಗಿ ಹೋಗುತ್ತಿತ್ತು.

**2. ಪೌಲ ಮತ್ತು ಬಾರ್ನಬನ ಮಧ್ಯದಲ್ಲಿ ಜಗಳ.**-ಕೂಟವಾದ ಸ್ವಲ್ಪ ಸಮಯದ ನಂತರ ತಾವು ಸ್ಥಾಪಿಸಿದ ಸಭೆಗಳನ್ನು ಪುನಃ ಸಂದರ್ಶಿಸಲು ಪೌಲನಿಗೆ ಬಾರ್ನಬನು ಸೂಚಿಸಿದನು. ತನ್ನ ಚಿಕ್ಕಪ್ಪನ ಮಗ ಮಾರ್ಕನನ್ನು ಪುನಃ ಕರೆದುಕೊಂಡು ಹೋಗಲು ಬಾರ್ನಬಸನು ಅಪೇಕ್ಷಿಸಿದನು (ಕೊಲೊಸ್ಸೆ 4:10); ಆದರೆ ಅವನು ಮೊದಲು ಅವರನ್ನು ಬಿಟ್ಟು ಬಂದದ್ದರಿಂದ ಪೌಲನು ಅವನಲ್ಲಿ ನಂಬಿಕೆಯಿಡಲಿಲ್ಲ. ವಾದವು ತೀಕ್ಷ್ಣವಾಗಿ ಪೌಲ ಮತ್ತು ಬಾರ್ನಬ ಬೇರೆ ಬೇರೆಯಾದರು, ಅನಂತರದಲ್ಲಿ ಮಾರ್ಕನು ಪೌಲನ ಭರವಸೆಗೆ ಪುನಃಸ್ಥಾಪಿಸಲ್ಪಟ್ಟದ್ದು ಆನಂದದ ವಿಷಯವಾಗಿದೆ (2 ತಿಮೊಥೆ 4:11).

**3. ಚಿಕ್ಕ ಆಸಿಯಾಕ್ಕೆ ಎರಡನೆಯ ಸಂದರ್ಶನ.**-ಪೌಲ ಮತ್ತು ಬಾರ್ನಬರು ಕೂಟದಿಂದ ಹಿಂದಿರುಗಿ ಬಂದ ನಂತರ, ಸೀಲನು ಅವರ ಜತೆಗೂಡಿದನು. ಪೌಲನು ಅವನನ್ನು ತನ್ನ ಪ್ರಯಾಣದ ಸಂಗಾತಿಯನ್ನಾಗಿ ಮಾಡಿಕೊಂಡನು. ಸಿರಿಯಾ ಮತ್ತು ಕಿಲಿಕ್ಯಗಳ ಮುಖಾಂತರ ಹೋಗಿ, ಸಭೆಗಳಿಗೆ ತನ್ನ ಉದ್ದೇಶಿತ ಸಂದರ್ಶನಗಳನ್ನು ಸೂಚಿಸಿದನು. ಲುಸ್ತ್ರದಲ್ಲಿ ತಿಮೊಥೆ ಎಂಬ ಹೆಸರಿನ ಯುವಕ ಶಿಷ್ಯನನ್ನು ಅವನು ಕಂಡುಕೊಂಡನು. ಅವನ ತಂದೆಯು ಗ್ರೀಕನು; ಆದರೆ ಅವನು ತನ್ನ ಯೆಹೂದಿ ತಾಯಿ ಯೂನೀಕೆ ಮತ್ತು ತನ್ನ ಅಜ್ಜಿ ಲೋವಿಯಿಂದ ಧಾರ್ಮಿಕನಾಗಿ ಬೆಳೆಸಲ್ಪಟ್ಟಿದ್ದನು (2 ತಿಮೊಥೆ 1:5). ಅವನು ಪೌಲನ ಮೊದಲನೆಯ ಪ್ರಯಾಣದಲ್ಲಿ ಮಾರ್ಪಟ್ಟವನೆಂಬುದರಲ್ಲಿ ಸಂಶಯವಿಲ್ಲ; ಲುಸ್ತ್ರದಲ್ಲಿ ಅವನ ಹಿಂಸೆಗಳಿಗೆ ಸಾಕ್ಷಿಯಾಗಿದ್ದನು. ಪೌಲನ ಗುಣಗಳಲ್ಲಿ ಒಂದು ಸುಂದರವಾದ ಲಕ್ಷಣವು ಯುವ ಜನರನ್ನು ಸ್ವಾರ್ಥತ್ಯಾಗದ ತನ್ನ ಶ್ರಮೆಯ ಜೀವಿತಕ್ಕೆ ಆಕರ್ಷಿಸುವುದಾಗಿತ್ತು; ಮತ್ತು ತಿಮೊಥೆಯು ಇಂದಿನಿಂದ ಮುಂದೆ ಪೌಲನ ಅತೀ ನಿಕಟವರ್ತಿ ಜೊತೆ ಕೆಲಸದವನಾದನು.

ಆದರೆ ಈಗ ಸ್ಥಾಪಿಸಿದ ಸಭೆಗಳನ್ನು ಪುನಃ ಸಂದರ್ಶಿಸುವುದಕ್ಕಿಂತ ಹೆಚ್ಚು ವಿಶಾಲವಾದ ಯೋಜನೆಗಳು ಪೌಲನಿಗಿದ್ದವು; ಆದುದರಿಂದ ಅವನು ಫ್ರುಗ್ಯ ಮತ್ತು ಗಲಾತ್ಯಗಳಲ್ಲಿ ಹೊಸ ಜಯಗಳಿಗಾಗಿ ಮುನ್ನಡೆದನು. ಅವನ ಸ್ವಂತ ಯೋಜನೆಗಳಿಗಿಂತ ಇನ್ನೂ ಹೆಚ್ಚಿನ ಯೋಜನೆಗಳು ದೇವರಿಗಿದ್ದವು; ಎಡ ಬಲಗಳಲ್ಲಿ ನಡಿಸುತ್ತ ಆತನು ಅವನನ್ನು ತ್ರೋವಕ್ಕೆ ನಡಿಸಿದನು. ಅಲ್ಲಿ ಅವನಿಗೆ ಒಂದು ದರ್ಶನವಾಯಿತು, "ಬಂದು, ನಮಗೆ ಸಹಾಯ ಮಾಡು"[2] ಎಂದು ಮಕೆದೋನ್ಯದ ಒಬ್ಬ ಮನುಷ್ಯನು ಹೇಳಿದನು. ತ್ರೋವದಲ್ಲಿ ಪೌಲನು ನಿಂತುಕೊಂಡಾಗ ಅದು ಅರ್ಥಗರ್ಭಿತವಾದ ತಾಸಾಗಿತ್ತು. ಅವನ ಹಿಂದೆ ಬಲವಾದ ಭೂತಕಾಲವಿದ್ದ ಆಸಿಯಾ ಇತ್ತು; ಅವನ ಮುಂದೆ ಯುರೋಪ್ ಇತ್ತು; ಅದರ ದಕ್ಷಿಣ ಅಂಚಿಗೆ ರೋಮ್ ಇತ್ತು, ಅದು ಸರ್ವಶಕ್ತಿಯ ವರ್ತಮಾನಕಾಲವನ್ನು ಧರಿಸಿದ್ದಾಗಿತ್ತು. ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಇನ್ನೂ ಹೆಚ್ಚು ಬಲವಾದ ಭವಿಷ್ಯವುಳ್ಳ ಬರ್ಬೇರಿಯನ್ನರು ಇದ್ದರು. "ನಿನ್ನ ತುಪಾಕಿಗಳನ್ನು ಯುರೋಪಿನ ಕಡೆಗೆ ತಿರುಗಿಸು, ಭವಿಷ್ಯವನ್ನು ಗೆದ್ದುಕೋ."

**4. ಯುರೋಪಿನಲ್ಲಿ ಸುವಾರ್ತೆಯು ನೆಡಲ್ಪಟ್ಟದ್ದು; ಫಿಲಿಪ್ಪಿನಲ್ಲಿ ಪ್ರಾರಂಭ.**-ತ್ರೋವದಲ್ಲಿ "ನಾವು" ಎಂದು ಹೇಳಲ್ಪಟ್ಟ ವಿವರಣೆಗಳು ಸೂಚಿಸುವಂತೆ ಲೂಕನು ಪೌಲನೊಂದಿಗೆ ಜತೆಗೂಡಿದನು. ನಿಯಾಪೊಲಿಗೆ ಪ್ರಯಾಣ ಮಾಡಿ ಮಿಶನರಿಗಳು ಜಿಲ್ಲೆಯ ಪ್ರಮುಖ ಪಟ್ಟಣವಾದ ಫಿಲಿಪ್ಪಿಯನ್ನು ತಲುಪಿದರು. ಫಿಲಿಪ್ಪಿಯ ಮಿಲಿಟರಿ ಸ್ಥಳವಾಗಿತ್ತು. ವ್ಯಾಪಾರದ ಪಟ್ಟಣವಾಗಿರದೇ ಇದ್ದುದರಿಂದ ಅಲ್ಲಿ ಕೆಲವೇ ಜನ ಯೆಹೂದ್ಯರಿದ್ದರು, ಸಭಾಮಂದಿರವಿರಲಿಲ್ಲ. ಆದರೆ ನದಿಯ ಪಕ್ಕದಲ್ಲಿ ಮಹಿಳೆಯರು ಕೂಡಿಬರುತ್ತಿದ್ದ

ಶನಿವಾರದ - ಪ್ರಾರ್ಥನಾ ಕೂಟವಿರುತ್ತಿತ್ತು. ಪೌಲನು ಅದರಲ್ಲಿ ಭಾಗವಹಿಸಿದನು. ಆ ನದಿ ತೀರದ ಪ್ರಾರ್ಥನಾ ಕೂಟದಲ್ಲಿ ಕ್ರೈಸ್ತರು ಯುರೋಪಿನಲ್ಲಿ ತನ್ನ ಬೆಳೆಯುವ ಕಾರ್ಯಪ್ರಾರಂಭಿಸಿತು. ಮತ್ತು ಲುದ್ಯ ಎಂಬ ಹೆಸರಿನ ವ್ಯಾಪಾರ ಮಹಿಳೆ ಅದರ ಪ್ರಥಮ ಫಲವಾದಳು. ದೆವ್ವಹಿಡಿದ ಗುಲಾಮ ಬಾಲಕಿಯು ಜೀವಿಗಳಲ್ಲಿ ಕೂಗುತ್ತ ಬಂದದ್ದರಿಂದ ಮಿಶನರಿಗಳಿಗೆ ಬೇಗನೇ ಸ್ವಾಗತಿಸದ ಪ್ರಚಾರವಾಯಿತು. ಆ ಬಾಲಕಿಯಿಂದ ದೆವ್ವವನ್ನು ಹೊರಗೆ ಹಾಕಿದ್ದು, ಆಕೆಯ ಯಜಮಾನರ ಆದಾಯಕ್ಕೆ ಪೆಟ್ಟುಕೊಟ್ಟಿತು. ಕಾನೂನಿಗೆ ವಿರುದ್ಧವಾದ ಪದ್ಧತಿಗಳನ್ನು ಪರಿಚಯಿಸುತ್ತಿರುವನೆಂಬ ದೂರಿನಿಂದ ಪೌಲ ಮತ್ತು ಸೀಲರು ಹೊಡೆಯಲ್ಪಟ್ಟು ಸೆರೆಮನೆಯಲ್ಲಿ ಹಾಕಲ್ಪಟ್ಟರು. ರಾತ್ರಿಯಲ್ಲಿ ಅವರ ಹಾಡುಗಳು ಮತ್ತು ಸೆರೆಮನೆಯ ಬಾಗಿಲುಗಳನ್ನು ತೆರೆದ ಭೂಕಂಪವು ಅನ್ಯನಾದ ಸೆರೆಮನೆಯ ಅಧಿಕಾರಿಯನ್ನು ಅದರ ಮುಂದೆ ಮೊಣಕಾಲೂರುವಂತೆ ಮಾಡಿದವು; ಮತ್ತು ಬೆಳ ಗಾಗುವ ಮೊದಲು ಅವನು ಹಾಗೂ ಅವನ ಮನೆಯವರು ದೇವರಲ್ಲಿ ಆನಂದ ಪಡುವ ಬಾಪ್ತಿಸ್ಮ ಹೊಂದಿದ ವಿಶ್ವಾಸಿಗಳಾಗಿದ್ದರು.

**5. ಫಿಲಿಪ್ಪಿಯಿಂದ ಅಥೇನೆಗೆ.**-ಲೂಕನನ್ನು ಮತ್ತು ಬಹುಶಃ ತಿಮೊಥೆಯನ್ನು ಪ್ರಾರಂಭದ ಸಭೆಯನ್ನು ನೋಡಿಕೊಳ್ಳುವುದಕ್ಕಾಗಿ ಬಿಟ್ಟು, ಅವರು ಪೂರ್ವ ದಿಕ್ಕಿಗೆ ಯಜ್ಞಾಶಿಯದ ಮುಖಾಂತರ ಕಪ್ಪು ಸಮುದ್ರವನ್ನು ಮತ್ತು ಎಡ್ರಿಯಾಟಿಕನ್ನು ಕೂಡಿಸಿದ ದೊಡ್ಡ ಮಿಲಿಟರಿ ಮಾರ್ಗದ ಮುಖಾಂತರ ಪ್ರಯಾಣಮಾಡಿದರು. ಅಂಫಿಪೊಲಿ ಹಾಗೂ ಅಪೊಲೋನಿಯವನ್ನು ದಾಟಿ, ಮಕೆದೋನ್ಯದ ಮಹಾ ಪಟ್ಟಣವಾದ ಥೆಸಲೊನೀಕಕ್ಕೆ ಬಂದರು. ಇಲ್ಲಿ ಪೌಲನು "ತನ್ನ ವಾಡಿಕೆಯಂತೆ"[3] ಅನೇಕ ಸಬ್ಬತ್ತ ದಿನಗಳಂದು ಸಭಾಮಂದಿರದಲ್ಲಿ ಕ್ರಿಸ್ತನನ್ನು ಪ್ರಸಂಗಿಸಿದನು, ಕೆಲವು ಜನ ಯೆಹೂದ್ಯರು ಹಾಗೂ ಅನೇಕ ಗ್ರೀಕರು ನಂಬಿದರು; ಆದರೆ ನಂಬದೇ ಇದ್ದ ಯೆಹೂದ್ಯರು ತಮ್ಮ ರೀತಿಯಂತೆ, ಮಿಶನರಿಗಳು ಬೆರೆಯಕ್ಕೆ ಓಡಿಹೋಗುವ ಮೊದಲು ಹಿಂಸೆಯ ಬಿರುಗಾಳಿಯನ್ನೆಬ್ಬಿಸಿದರು. ಥೆಸಲೊನೀಕದವರಿಗಿಂತ ಹೆಚ್ಚು ಕುಲೀನರಾದ ಬೆರೆಯದವರು ಅನುದಿನವೂ ಪರಿಶುದ್ಧ ಬರಹಗಳನ್ನು ಅಧ್ಯಯನ ಮಾಡಿದರು. ಹಲವಾರು ಜನ ಯೆಹೂದ್ಯರು ಮತ್ತು ಗ್ರೀಕರು ಮಾರ್ಪಾಟ ಹೊಂದಿದ್ದು ಪರಿಣಾಮವಾಯಿತು. ಥೆಸಲೊನೀಕದ ಯೆಹೂದ್ಯರು ಹಟಹಿಡಿದು ಬೆರೆಯಕ್ಕೂ ಪೌಲನನ್ನು ಹಿಂದಟ್ಟಿ ಬಂದರು. ಸಮುದ್ರಕ್ಕೆ ಹೋಗಿ, ಪೌಲನು ಅಥೇನೆಗೆ ಸಮುದ್ರಯಾನ ಮಾಡಿದನು.

**6. ಅಥೇನೆಯಲ್ಲಿ ಪೌಲನು.**-ಶಾಸ್ತ್ರೀಯವಾದ ಚರಿತ್ರೆಯಲ್ಲಿಯಂತೆ ಕ್ರೈಸ್ತ ಚರಿತ್ರೆಯಲ್ಲಿ ಅಥೇನೆಯು ಪ್ರಸಿದ್ಧ ಪಾತ್ರವಹಿಸಿರಲಿಲ್ಲ. ಆದಾಗ್ಯೂ ಅದು ಪುರಾತನ ಅಥೇನ್ಸನ ಮಹಿಮೆಗಳು ಶಿಲುಬೆಯ ಹೆಚ್ಚು ಆತ್ಮಿಕ ಮಹಿಮೆಗಳೊಂದಿಗೆ ಮೊದಲು ಎದುರಿಸಲ್ಪಟ್ಟಾಗಿನಕ್ಕಿಂತ ಹೆಚ್ಚು ಆಸಕ್ತಿಯುಳ್ಳವುಗಳಾಗಿದ್ದವು. ತನ್ನೊಂದಿಗೆ ಅಥೇನೆಯಲ್ಲಿ ಕೂಡಿಕೊಳ್ಳಬೇಕೆಂದು ಪೌಲನು ಸೀಲನಿಗೂ ತಿಮೊಥೆಗೂ ಹೇಳಿ ಕಳುಹಿಸಿದ್ದನು. ಈ ಮಧ್ಯದಲ್ಲಿ ತನ್ನ ಸುತ್ತಲಿದ್ದ ವಿಗ್ರಹಾರಾಧನೆಗಳ ಮೇಲೆ ಅವನ ಹೃದಯವು ಚಲಿಸಿತು. ಅವನು ಯೆಹೂದಿ ಸಭಾಮಂದಿರದಲ್ಲಿ ಮತ್ತು ಅಗೋರಾದಲ್ಲಿ ಇಲ್ಲವೇ ಪಟ್ಟಣದ ಬಹಿರಂಗ ಕೂಟದ ಸ್ಥಳದಲ್ಲಿ ಹೊಸ ವಿಶ್ವಾಸವನ್ನು ಬೋಧಿಸಿದನು. ಕೆಲವು ತತ್ವಜ್ಞಾನಿಗಳಲ್ಲಿ ಕುತೂಹಲವು ಆಸಕ್ತಿಯನ್ನು ಹುಟ್ಟಿಸಿತು. ಪೌಲನನ್ನು ಅರಿಯೋಪಾಗದಲ್ಲಿ ಸಂದರ್ಶಿಸಿದರು. ಅಥೇನೆಯ ಪಂಡಿತರು ಅವನ ಮಾತುಗಳನ್ನು ಕೇಳಿದರು. ಆ ಸ್ಥಳದಲ್ಲಿ, ಅದ ಐತಿಹಾಸಿಕವಾಗಿ ಬಹಳ ಪ್ರಸಿದ್ಧವಾದದ್ದು, ಪೌಲನು ತನ್ನ ಪಾಂಡಿತ್ಯಪೂರ್ಣ ಭಾಷಣ ಮಾಡಿದನು, ನಮಗೆ ಬಂದಿರುವ ಎರಡನೆಯಭಾಷಣ ಅದಾಗಿರುತ್ತದೆ, ಮೊದಲಿನ ಮತ್ತು ಎರಡನೆಯ ಭಾಷಣಗಳ ಮಧ್ಯದಲ್ಲಿ ಗಮನಾರ್ಹ

ವಾದ ಭಿನ್ನತೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 13:16-41). ಅಂತಿಯೋಕ್ಯದ ಸಭಾಮಂದಿರದಲ್ಲಿ ಯೆಹೂದಿ ಶ್ರೋತೃಗಳಿಗೆ ಅವರ ಜನಾಂಗಿಕ ಚರಿತ್ರೆ ಮತ್ತು ಶ್ರೇಷ್ಠವಾದ ಪ್ರವಾದನೆಗಳ ಮೇಲೆ ಪ್ರಸಂಗಿಸಿದ್ದನು. ಈ ಎರಡನೆಯದರಲ್ಲಿ, ಎಲ್ಲಾ ಕಾಲಗಳಲ್ಲಿ ಅದ್ಭುತಕರವಾದ ಕಲೆಯ ಸನ್ನಿಧಿಯಲ್ಲಿ ಬುದ್ಧಿವಂತ ಗ್ರೀಕರಿಗೆ ಅಥೇನೆಯ ಅರಿಯೋ ಪಾಗದಲ್ಲಿ ಮಾಡಿದ ಪ್ರಸಂಗಗಳಿರುವುದು. ವಾದದಲ್ಲಿ ಮತ್ತು ವಿಷಯದ ವಿಧಾನವು ಭಿನ್ನವಾಗಿದ್ದರೂ ಅಂತ್ಯವು ಒಂದೇಯಾಗಿರುತ್ತದೆ - ಕ್ರಿಸ್ತನನ್ನು ಮತ್ತು ಆತನು ಶಿಲುಬೆಗೆ ಹಾಕಲ್ಪಟ್ಟದ್ದನ್ನು, ಕ್ರಿಸ್ತನನ್ನು ಮತ್ತು ಪುನರುತ್ಥಾನವನ್ನು ಪ್ರಸಂಗಿಸುವುದಾಗಿತ್ತು. ಆದರೆ ಸುಸಂಸ್ಕೃತರಾದ ಅಥೇನೆಯವರು ಯೆಹೂದ್ಯರು ತಮ್ಮ ಸಂಪ್ರದಾಯಗಳಿಗೆ ಅಂಟಿ ಕೊಂಡಂತೆ ತಮ್ಮ ತತ್ವಜ್ಞಾನಗಳಿಗೆ ಅಂಟಿಕೊಂಡಿದ್ದರು. ಹೀಗಿದ್ದರೂ ಕೆಲವೇ ಜನರು ಕ್ರಿಸ್ತನಿಗಾಗಿ ಜಯಿಸಲ್ಪಟ್ಟರು. ಅವರಲ್ಲಿ ಒಬ್ಬನು ಅರಿಯೋಪಾಗದ ನ್ಯಾಯಾಧೀಶರಲ್ಲಿ ಒಬ್ಬನಾದ ದಿಯೊನಿಸಿಯಸನು ಮತ್ತು ದಾಮರಿ ಎಂಬ ಸ್ತ್ರೀಯಾಗಿದ್ದರು ಅಪೊಸ್ತಲರ ಕೃತ್ಯಗಳು 17:15, 16 ಮತ್ತು 1 ಥೆಸಲೊನೀಕ 3:1ನ್ನು ಹೋಲಿಸುವದರಿಂದ, ತಿಮೊಥೆಯು ಅಥೇನೆಯಲ್ಲಿ ಪೌಲನೊಂದಿಗೆ ಸೇರಿಕೊಂಡನು ಹಾಗೂ ಅವನಿಂದ ಥೆಸಲೊನೀಕಕ್ಕೆ ಕಳುಹಿಸಲ್ಪಟ್ಟನು ಎಂಬುದು ಸ್ಪಷ್ಟವಾಗುತ್ತದೆ. ಅಥೇನೆಯು ಪೌಲನು ಹಿಂಸೆಯನ್ನು ಅನುಭವಿಸದಿರುವ ಪಟ್ಟಣಗಳಲ್ಲಿ ಒಂದಾಗಿರುತ್ತದೆ; ಆದರೆ ಅದು ಫಲವಿಲ್ಲದ ಕ್ಷೇತ್ರವಾ ಗಿತ್ತು, ಮತ್ತು ಬೇಗನೇ ಅವನು ಅದನ್ನು ಬಿಟ್ಟು ಕೊರಿಂಥಕ್ಕೆ ಹೋದನು.

**7. ಕೊರಿಂಥದಲ್ಲಿ ಪೌಲನ ದೀರ್ಘ ಪ್ರಯಾಣ.**-ಪೌಲನ ಸಮಯದಲ್ಲಿ ಅಥೇನೆಯು ಬೋಸ್ಟನ್‌ಸ ಕೊರಿಂಥವು ಗ್ರೀಸದ ನ್ಯೂಯಾರ್ಕ್ ಆಗಿತ್ತು. ಈ ವ್ಯಾಪಾರದ ಮಹಾ ಪಟ್ಟಣದೊಳಗೆ ಪೌಲನು ಭಯದೊಂದಿಗೆ ಮತ್ತು ನಡುಗುವಿಕೆಯೊಂದಿಗೆ ಪ್ರವೇಶಿಸಿದನು (1 ಕೊರಿಂಥ 2:3). ಅಥೇನೆಯಲ್ಲಿ ತನ್ನ ಸೋಲಿನ ಬಗ್ಗೆ ಅವನು ಕುಂದಿಹೋಗಿದ್ದನು. ಅವನು ಹಣವಿಲ್ಲದವನೂ ಏಕಾಂಗಿಯೂ ಆಗಿದ್ದನು. ತನ್ನ ಅನುದಿನದ ಊಟಕ್ಕಾಗಿ ಗುಡಾರ ನೇಯುವ ಕೆಲಸಕ್ಕೆ ಮೊರೆಹೋಗಬೇಕಾಯಿತು. ಆದರೆ ಪೌಲನು ಸ್ನೇಹಿತರನ್ನು ಮಾಡಿಕೊಳ್ಳುವಲ್ಲಿ ಇಲ್ಲವೇ ಕಂಡುಕೊಳ್ಳುವಲ್ಲಿ ಬಹಳ ಕಾಲ ಕಾಯಬೇಕಾಗಿರುತ್ತಿರಲಿಲ್ಲ. ಬೇಗನೇ ಅವನು ಅಕ್ವಿಲ ಮತ್ತು ಪ್ರಿಸ್ಕಿಲ್ಲರೆಂಬ ತನ್ನ ಜೊತೆ ಉದ್ಯೇಗಿಗಳೊಂದಿಗೆ ಸಹಾಯ ಭಾವನೆಯಲ್ಲಿ ಬಂದನು. ಅವರು ಈಗಾಗಲೇ ಶಿಷ್ಯರಾಗಿರದಿದ್ದರೆ ಈಗ ಶಿಷ್ಯರಾದರು. ವಾರವೆಲ್ಲಾ ಅವರೊಂದಿಗೆ ಕೆಲಸಮಾಡುತ್ತ, ಸಭಾಮಂದಿರದಲ್ಲಿ ಅವನು ಸಬ್ಬತ್ತ ದಿನದಂದು ಪ್ರಸಂಗಿಸುತ್ತಿದ್ದನು. ಸೀಲ ಮತ್ತು ತಿಮೊಥೆಯರು ತಲುಪಿದಾಗ, ಅವರು ಫಿಲಿಪ್ಪಿಯಿಂದ ಕೊಡುಗಳೊಂದಿಗೆ ಬಂದರು. ಈಗ ಅವನ ಕೈಗಳು ಸ್ವತಂತ್ರವಾದವು. ಒಂದೂವರೆ ವರ್ಷದ ವರೆಗೆ ಸೇವೆಗೆ ತನ್ನನ್ನು ಮಹಾ ಬಲದೊಂದಿಗೆ ಕೊಟ್ಟನು (ಹೋಲಿಸು ಅಪೊಸ್ತಲರ ಕೃತ್ಯಗಳು 18:5, 9, 10; ಫಿಲಿಪ್ಪಿ 4:15). ತಿಮೊಥೆಯನು ತಲುಪಿದ ನಂತರ ಕೂಡಲೇ ಅವನು ಥೆಸಲೊನೀಕದ ವರಿಗೆ ತನ್ನ ಮೊದಲನೆಯ ಪತ್ರವನ್ನು ಬರೆದನು (1 ಥೆಸಲೊನೀಕ 3:6), ಮತ್ತು ಸ್ವಲ್ಪ ಸಮಯದ ನಂತರ ಎರಡನೆಯ ಪತ್ರಿಕೆಯನ್ನು ಬರೆದನು. ನಮಗೆ ಬಂದಿರುವ ಪೌಲನ ಪತ್ರಿಕೆಗಳಲ್ಲಿ ಮೊದಲಿನವುಗಳಾಗಿವೆ.

**8. ಅಂತಿಯೋಕ್ಯಕ್ಕೆ ಹಿಂದಿರುಗುವಿಕೆ.**-ಕೊರಿಂಥದ ಇಸ್ಥ್‌ಮ್‌ಸನ್ನು ದಾಟಿ ಪೌಲನು ಅಕ್ವಿಲ್ ಮತ್ತು ಪ್ರಿಸ್ಕಿಲ್‌ರೊಂದಿಗೆ ಎಫೆಸಕ್ಕೆ ಪ್ರಯಾಣ ಮಾಡಿದನು, ಇಲ್ಲಿಯ ಸಭಾಮಂದಿರದಲ್ಲಿ ಅವನ ಪ್ರಸಂಗವು ಪ್ರಭಾವಭೀರಿತು, ಅವರು ಅವನು ಅಲ್ಲಿ ಉಳಿಯಬೇಕೆಂದು ಅಪೇಕ್ಷಿಸಿದರು, ಆದರೆ ಹಿಂದಿರುಗಿ ಬರುವನೆಂಬ ವಾಗ್ದಾನ

ದೊಂದಿಗೆ ಅವನು ಅಲ್ಲಿಂದ ಕೈಸರಯಕ್ಕೆ ಅನಂತರ ಅಂತಿಯೋಕ್ಯಕ್ಕೆ ಅವಸರದಿಂದ ಹೋದನು. ಹೀಗೆ ಪೌಲನ ಎರಡನೆಯ ಮತ್ತು ವಿಶಾಲವಾದ ಪ್ರಯಾಣವು ಅಂತ್ಯಗೊಂಡಿತು. ಆಸಕ್ತಿಯು ಯುರೋಪಿಗೆ ಬದಲಾಯಿತು, ಮತ್ತು ಕೊನೆಗೆ ರೋಮಿನಲ್ಲಿ ಕೇಂದ್ರೀಕರಿಸಲ್ಪಡುತ್ತದೆ.

## III. ಮೂರನೆಯ ಪ್ರಯಾಣ.

### (ಅಪೊಸ್ತಲರ ಕೃತ್ಯಗಳು 18:23-21:26.)

**1. ಎಫೆಸದಲ್ಲಿ ಪೌಲನ ಮೂರು ವರ್ಷಗಳು.**-ಅಂತಿಯೋಕ್ಯದಲ್ಲಿ ಕೆಲ ಸಮಯ ಕಳೆದ ನಂತರ ಪೌಲನು ಮಹಾಸುವಾರ್ತಾ ಸಭೆಗೆ ಅಂತಿಮ ವಂದನೆ ಸಲ್ಲಿಸಿದನು. ಅವನ ಮುಂದಿನ ಸ್ಥಳವು ಎಫೆಸವಾಗಿತ್ತು. ಮೂರನೆಯ ಪ್ರಯಾಣದಲ್ಲಿ ಇದು ಆಸಕ್ತಿಯುಳ್ಳ ಕೇಂದ್ರವಾಗಿತ್ತು. ಅದು ಚೆನ್ನಾಗಿ ಆಯ್ಕೆ ಮಾಡಿಕೊಂಡದ್ದಾಗಿತ್ತು; ಯಾಕಂದರೆ, ಅದು ಚನ್ನಾಗಿ ಆಯ್ಕೆ ಮಾಡಿಕೊಂಡದ್ದಾಗಿತ್ತು; ಯಾಕಂದರೆ ಸಿರಿಯಕ್ಕೆ ಅಂತಿಯೋಕ್ಯವು ಏನಾಗಿತ್ತೋ ಕೊರಿಂಥವು ಗ್ರೀಸಿಗೆ, ಮತ್ತು ಇಟಾಲಿಗೆ ರೋಮವು ಮತ್ತು ಪಶ್ಚಿಮಕ್ಕೆ ಏನಾಗಿತ್ತೋ, ಎಫೆಸವು ಪಶ್ಚಿಮ ಚಿಕ್ಕ ಆಸಿಯಾದ ಕಾರ್ಯಾಚರಣೆಯ ಜೀವನಕ್ಕಾಗಿತ್ತು. ಎಫೆಸಕ್ಕೆ ಹೋಗುವ ತನ್ನ ಮಾರ್ಗದಲ್ಲಿ ಪೌಲನು ತನ್ನ ಹಿಂದಿನ ಗಲಾತ್ಯ ಮತ್ತು ಫ್ರುಗ್ಯಗಳ ಮುಖಾಂತರ ಪ್ರಯಾಣಮಾಡಿದನು. ಕೊರಿಂಥದಿಂದ ಅಂತಿಯೋಕ್ಯಕ್ಕೆ ಅವನು ಹಿಂದಿರುಗುತ್ತಿದ್ದಾಗ ಪೌಲನು ಹಿಂದಿನ ಪ್ರಯಾಣದಲ್ಲಿ ಎಫೆಸವನ್ನು ತಲುಪಿ, ಅಲ್ಲಿಯ ಜನರ ನಾಡಿಯಿಡಿತವನ್ನು ಕಂಡುಕೊಂಡನು ಹಾಗೂ ಅಕ್ವಿಲ ಮತ್ತು ಪ್ರಿಸ್ಕಿಲ್ಲರನ್ನು ಅಲ್ಲಿ ಬಿಟ್ಟು ಬಂದನು. ಅವನಿಲ್ಲದಿದ್ದಾಗ ಸಿದ್ಧತೆಯ ಕಾರ್ಯವು ಮುಂದುವರಿದಿತ್ತು. ಅಪೊಲ್ಲೋಸ ಎಂಬ ಹೆಸರಿನ ಅಲೆಕ್ಸಾಂಡ್ರಿಯದ ಒಬ್ಬ ಮಾತುಗಾರನಾದ ಯೆಹೂದ್ಯನು ಎಫೆಸಕ್ಕೆ ಬಂದನು. ಯೋಹಾನನ ಬಾಪ್ತಿಸ್ಮದ ಮಹಾ ಬಲದೊಂದಿಗೆ ಪ್ರಸಂಗಿಸಿದನು. ಅಕ್ವಿಲ ಮತ್ತು ಪ್ರಿಸ್ಕಿಲ್ಲರು ಸುವಾರ್ತೆಯಲ್ಲಿ ಅವನಿಗೆ ಹೆಚ್ಚು ಪರಿಪೂರ್ಣತೆಯನ್ನು ಬೋಧಿಸಿದರು. ಅಪೊಲ್ಲೋಸನು ಆಮೇಲೆ ಕೊರಿಂಥಕ್ಕೆ ಬಂದನು. ಅಲ್ಲಿ ಪೌಲನು ಯಶಸ್ವಿಯಾಗಿ ಪ್ರಾರಂಭಿಸಿದ ಕಾರ್ಯವನ್ನು ಮುಂದರಿಸಿದನು (ಹೋಲಿಸು ಅಪೊಸ್ತಲರ ಕೃತ್ಯಗಳು 18:27; 1 ಕೊರಿಂಥ 3:4-7). ಎಫೆಸಕ್ಕೆ ಪೌಲನು ತಲುಪಿದ ನಂತರ ಮೂರು ತಿಂಗಳುಗಳ ವರೆಗೆ ಸಭಾಮಂದಿರದಲ್ಲಿ ಪ್ರಸಂಗಿಸಿದನು. ಕೊನೆಗೆ ಅವನು ಯೆಹೂದ್ಯರನ್ನು ಬಿಟ್ಟುಬಿಟ್ಟು, ಕ್ರೈಸ್ತರನ್ನು ಪ್ರತ್ಯೇಕವಾದ ಸಮಾಜವನ್ನಾಗಿ ಮಾಡಲು ಒತ್ತಾಯಿಸಲ್ಪಟ್ಟನು. ಎರಡು ವರ್ಷಗಳ ವರೆಗೆ ತುರನ್ನನ ಶಾಲೆಯಲ್ಲಿ ದಿನಂಪ್ರತಿ ಪ್ರಸಂಗಿಸಿದನು. ಏಶಿಯಾ ಪ್ರಾಂತ್ಯದ ಎಲ್ಲಾ ಭಾಗಗಳ ಯೆಹೂದಿ ಮತ್ತು ಗ್ರೀಕ್ ಸಮೂಹಗಳನ್ನು ತಲುಪಿದನು. ಡಯಾನಾ ದೇವತೆಯ ಬೆಳ್ಳಿ ಗುಡಿಗಳ ಮಾರಾಟವು ಬಿದ್ದು ಹೋಗುವಷ್ಟು ಪೌಲನ ಪ್ರಸಂಗವು ಪರಿಣಾಮ ಮಾಡಿತು. ಒಂದು ಅಕ್ಕಸಾಲಗರ ಗುಂಪು ಪೌಲನ ಜೀವಕ್ಕೆ ಅಪಾಯ ತಂದಿತ್ತು. ಎಫೆಸದಲ್ಲಿ ಪೌಲನ ದೀರ್ಘ ಪ್ರಯಾಣದಲ್ಲಿ ಅವನು ಬಹುಶಃ ಕೊರಿಂಥವನ್ನು ಸಂದರ್ಶಿಸಿರಬೇಕು (2 ಕೊರಿಂಥ 12:14; 13:1). ಅವನು ಕೊರಿಂಥದವರಿಗೆ ಮೊದಲನೆಯ ಪತ್ರಿಕೆಯನ್ನು ಬರೆದನು (ಹೋಲಿಸು 1 ಕೊರಿಂಥ 16:5-9; ಅಪೊಸ್ತಲರ ಕೃತ್ಯಗಳು 19:20, 21; 20:1). ಅವರು ಅವನಿಗೆ ಒಂದು ಪತ್ರವನ್ನು ಬರೆದರು (1 ಕೊರಿಂಥ 7:1), ಮತ್ತು ಅವನು ಅವರಿಗೆ ಒಂದನ್ನು ಬರೆದನು (1 ಕೊರಿಂಥ 5:9), ಅವುಗಳಲ್ಲಿ ಯಾವುದೂ ನಮಗೆ ಬಂದಿರುವುದಿಲ್ಲ.

**2. ಮಕೆದೋನ್ಯದಲ್ಲಿ ಮತ್ತು ಅಖಾಯದಲ್ಲಿ ಎರಡನೆಯ ಪ್ರಯಾಣ.**- ಮತ್ತೊಮ್ಮೆ ಆಯೆಜಿಯನ್ನನ್ನು ದಾಟಿ, ಪೌಲನು ಯುರೋಪಿನ ಎರಡನೆಯ ಪ್ರಯಾಣ ಮಾಡಿದನು. ಅದರ ಬಗ್ಗೆ ನಮಗೆ ವಿವರಣೆಗಳಿರುವುದಿಲ್ಲ. 2 ಕೊರಿಂಥ 1:8-10 ಮತ್ತು 2:12, 13 ಗಳನ್ನು ಅಪೊಸ್ತಲರ ಕೃತ್ಯಗಳು 20:2ರೊಂದಿಗೆ ಹೋಲಿಸುವದರಿಂದ, ಮಕೆದೋನ್ಯದ ಮುಖಾಂತರ ಪ್ರಯಾಣ ಮಾಡುತ್ತಿದ್ದಾಗ ಒಂದು ಕಡೆಯಿಂದ ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆಯು ಬರೆಯಲ್ಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ. ಕೊರಿಂಥವನ್ನು ತಲುಪಿ ಅಲ್ಲಿ ಅವನು ಮೂರು ತಿಂಗಳು ಇದ್ದನು. ಆ ಸಮಯದಲ್ಲಿ ಅವನು ರೋಮಾಪುರದವರಿಗೆ ಪತ್ರಿಕೆಯನ್ನು ಬರೆದನು (ಹೋಲಿಸು ರೋಮಾಪುರ 15:25, 26; ಅಪೊಸ್ತಲರ ಕೃತ್ಯಗಳು 20:3, 4; 24:17), ಬಹುಶಃ ಅದನ್ನು ಕೆಂಕ್ರೆಯ ಫೊಯಿಬೆಯೊಂದಿಗೆ ಕಳುಹಿಸಿದನು (ರೋಮಾಪುರ 16:1). ಈ ಮೂರನೆಯ ಪ್ರಯಾಣದಲ್ಲಿ ಒಂದು ಹಂತದಲ್ಲಿ ಗಲಾತ್ಯದವರಿಗೆ ಪತ್ರಿಕೆಯನ್ನು ಬರೆದನು. ಬಹುಶಃ ಕೊರಿಂಥದಿಂದ ಇಲ್ಲವೇ ಮೊದಲು ಎಫೆಸದಿಂದ ಬರೆದಿರಬೇಕು.

**3. ಹಣದ ಸಂಗ್ರಹ.**-ಯೆಹೂದ್ಯರಿಗೂ ಅನ್ಯರಿಗೂ ಮಧ್ಯದಲ್ಲಿರುವ ವಿಭಾಗಿಸುವ ಗೋಡೆಯನ್ನು ಕೆಡವುವುದನ್ನು ಪೌಲನು ಬಯಸಿದನು. ಅವನ ಹೃದಯದಲ್ಲಿದ್ದ ಅಂತ್ಯವು ಅದಾಗಿತ್ತು. ಅದಕ್ಕಾಗಿ ಅವನು ತನ್ನ ದೊಡ್ಡ ಜೀವವನ್ನು ಕೊಟ್ಟನು. ಒಂದು ಸಾಧನವು ಅವನು ಹಣವನ್ನು ಕೂಡಿಸುವುದಾಗಿತ್ತು. ಯೆರೂಸಲೇಮಿನಲ್ಲಿಯ ಬಡ ಯೆಹೂದ್ಯರಿಗಾಗಿ ಅನ್ಯಜನರೊಳಗೆ ಸಂಚರಿಸುವಾಗ ಹಣ ಸಂಗ್ರಹಿಸಿದನು, ಕೆಲವು ಚಿಕ್ಕ ವಾಕ್ಯಭಾಗಗಳಲ್ಲದೇ ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆಯ ಎಂಟನೆಯ ಮತ್ತು ಒಂಭತ್ತನೆಯ ಪೂರ್ತಿ ಅಧ್ಯಾಯಗಳು ಇದಕ್ಕೆ ಸಂಬಂಧಿಸಿವೆ. ಅದು ಗಲಾತ್ಯದಲ್ಲಿ, ಮಕೆದೋನ್ಯದಲ್ಲಿ ಮತ್ತು ಅಖಾಯದಲ್ಲಿ ಸಂಗ್ರಹಿಸಲ್ಪಟ್ಟಿತು (ಹೋಲಿಸು 1 ಕೊರಿಂಥ 16:1-3; ಗಲಾತ್ಯ 2:10; ರೋಮಾಪುರ 15:25, 26; ಅಪೊಸ್ತಲರ ಕೃತ್ಯಗಳು 24:17); ವಾರದ ಮೊದಲನೆಯ ದಿನದಲ್ಲಿ ಕೂಡಿಸಿದರು (1 ಕೊರಿಂಥ 16:1); ವೈಯಕ್ತಿಕ ಮನವಿ ಇಲ್ಲವೇ ಪತ್ರಿಕೆಯಿಂದಲ್ಲದೇ, ಹಣವನ್ನು ಸಂಗ್ರಹಿಸಿ, ಕಳುಹಿಸಿಕೊಡುವದಕ್ಕೆ ತೀತನನ್ನೂ ಇತರರನ್ನೂ ನೇಮಿಸಿದನು (2 ಕೊರಿಂಥ 8:6, 18, 23; 1 ಕೊರಿಂಥ 16:3).

**4. ಹಿಂದಿರುಗಿ ಸಮುದ್ರಯಾನ.**-ಪೌಲನು ಕೊರಿಂಥದಿಂದ ಸಿರಿಯಕ್ಕೆ ನೇರವಾಗಿ ಸಮುದ್ರ ಪ್ರಯಾಣ ಮಾಡಲು ಉದ್ದೇಶಿಸಿದ್ದನು; ಆದರೆ ವಿವರಿಸಲಾಗದ ಯೆಹೂದ್ಯರ ಒಳಸಂಚು ಮಕೆದೋನ್ಯದ ಮುಖಾಂತರ ಸುತ್ತುವರಿದ ಪ್ರಯಾಣ ಮಾಡುವಂತೆ ನಡಿಸಿತು. ಹಳೇ ಮತ್ತು ಹೊಸ ಭಕ್ತಿಯುಳ್ಳ ಸ್ನೇಹಿತರು ಅವನನ್ನು ಮಕೆದೋನ್ಯದಲ್ಲಿ ಭೇಟಿಯಾದರು (ಅಪೊಸ್ತಲರ ಕೃತ್ಯಗಳು 20:4-6), ಅವರಲ್ಲಿ ತಿಮೊಥೆ ಮತ್ತು ಲೂಕರು ಇದ್ದರು. ಲೂಕನು ಬಹುಶಃ ಅಲ್ಲಿಯ ಮೊದಲನೆಯ ಸಂದರ್ಶನದಿಂದ ಫಿಲಿಪ್ಪಿಯಲ್ಲಿ ಉಳಿದುಕೊಂಡಿರಬೇಕು (ಅಪೊಸ್ತಲರ ಕೃತ್ಯಗಳು 16:10, 13, 40; 20:6ರಲ್ಲಿ "ಅವರು" ಮತ್ತು "ನಾವು" ಎಂಬುದರ ಉಪಯೋಗವನ್ನು ಹೋಲಿಸಿರಿ). ಸಂಗಡಿಗರು ತ್ರೋವದಲ್ಲಿ ಒಂದು ವಾರವನ್ನು ಕಳೆದರು ರೊಟ್ಟಿಯನ್ನು ಮುರಿಯುವದಕ್ಕಾಗಿ ವಾರದ ಮೊದಲನೆಯ ದಿನದಲ್ಲಿ ಕೂಡಿಬಂದ ಶಿಷ್ಯರನ್ನು ಸಂದರ್ಶಿಸಿದರು (ಅಪೊಸ್ತಲರ ಕೃತ್ಯಗಳು 20:7). ಈ ವಾಕ್ಯಭಾಗವು ಇದನ್ನು ತೋರಿಸುವಂತೆ ಮಹತ್ವದ್ದಾಗಿದೆ (1) ಶಿಷ್ಯರು ಆಚರಿಸಿದ ದಿನ; (2) ಅದನ್ನು ಕೈಕೊಳ್ಳುತ್ತಿದ್ದ ರೀತಿ. ಇಲ್ಲಿ ಪೌಲನು ಮಾತಾಡುತ್ತಿದ್ದಾಗ, ಕಿಟಕಿಯಿಂದ ಕೆಳಗೆ ಬಿದ್ದ ಯೂತಿಖನನ್ನು ಜೀವಿಸುವಂತೆ ಮಾಡಿದನು. ಪಂಚಾಶತ್ತಮ ಹಬ್ಬದ ಸಮಯಕ್ಕೆ ಯೆರೂಸಲೇಮನ್ನು ತಲುಪುವದಕ್ಕೆ ಅವಸರ ಪಟ್ಟು, ಪೌಲನು

ಎಫೆಸದಲ್ಲಿ ಉಳಿದುಕೊಳ್ಳಲಿಲ್ಲ. ಆದರೆ ಮಿಲೇತದಲ್ಲಿ ಎಫೆಸ ಸಭೆಯ ಹಿರಿಯರನ್ನು ಭೇಟಿಯಾದನು. ತನ್ನ ಎಲ್ಲಾ ಭಾಷಣಗಳಲ್ಲಿ ಅತ್ಯಂತ ಸುಂದರವಾದ ಭಾಷಣವನ್ನು ಮಾಡಿದನು. ಅವರು ಸಂದರ್ಶಿಸಿದಲ್ಲೆಲ್ಲಾ ಶಿಷ್ಯರನ್ನು ಕಂಡುಕೊಂಡದ್ದು ಸುವಾರ್ತೆಯು ಬಹಳವಾಗಿ ಪ್ರಸಾರವಾಗುತ್ತಿರುವುದಕ್ಕೆ ಆಸಕ್ತಿಯುಳ್ಳ ಉದಾಹರಣೆಯಾಗಿದೆ: ತ್ರೋವ, ಮಿಲೇತೆ, ತೂರ, ಪ್ತೊಲೆಮಾಯ, ಸಮುದ್ರ ಪ್ರಯಾಣ ಮುಗಿದಲ್ಲಿ ಮತ್ತು ಕೈಸರಯದಲ್ಲಿ, ಇಲ್ಲಿ ನಾವು ನಮ್ಮ ಹಳೇ ಸ್ನೇಹಿತ ಫಿಲಿಪ್ಪನನ್ನು ಕಂಡುಕೊಳ್ಳುತ್ತೇವೆ (ಹೋಲಿಸು ಅಪೊಸ್ತಲರ ಕೃತ್ಯಗಳು 8:40), ಪ್ರವಾದನೆ ಹೇಳುತ್ತಿದ್ದ ನಾಲ್ಕು ಜನ ಹೆಣ್ಣು ಮಕ್ಕಳು ಅವನಿಗಿದ್ದರು. ತೂರ್ ಮತ್ತು ಕೈಸರಯ ಎರಡರಲ್ಲಿ, ಪೌಲನಿಗೆ ಯೆರೂಸಲೇಮಿನಲ್ಲಿ ಕಾದುಕೊಂಡಿದ್ದ ಗಂಡಾಂತರಗಳ ಬಗ್ಗೆ ಹೇಳಲ್ಪಟ್ಟಿತು; ಆದರೆ ನಾಲ್ಕು ವರ್ಷಗಳಿಂದ ಯೆಹೂದ್ಯರಿಗಾಗಿ ಅನ್ಯರಿಂದ ಕೂಡಿಸುತ್ತಿದ್ದ ಸಮಾಧಾನದ ಕಾಣಿಕೆಯನ್ನು ಯೆರೂಸಲೇಮಿಗೆ ಒಯ್ಯುವದಕ್ಕೆ ಯಾವುದೂ ಅವನಿಗೆ ಆತಂಕವೊಡ್ಡಲಿಲ್ಲ.

**5. ಯೆರೂಸಲೇಮಿನಲ್ಲಿ ಪೌಲನ ಸ್ವಾಗತ.**-ಪೌಲನು ಮಾರ್ಪಟ್ಟು ಈಗ ಆಗಲೇ ಹಲವಾರು ವರ್ಷಗಳಾಗಿತ್ತು. ಕೆಲವು ವರ್ಷಗಳವರೆಗೆ ಅನ್ಯ ಮಹಾ ಕೇಂದ್ರಗಳಲ್ಲಿ ಸುವಾರ್ತೆಯನ್ನು ನೆಡುವುದರಲ್ಲಿ ನಿರತನಾಗಿದ್ದನು. ಎರಡು ಇಲ್ಲವೇ ಮೂರು ಸಲ ಅವನು ಯೆರೂಸಲೇಮಿಗೆ ಸಂದರ್ಶನ ಕೊಟ್ಟಿದ್ದನು. ಕೆಲವು ವರ್ಷಗಳ ನಂತರ ಟೈಟಸನು[4] ಅದರ ಗೋಡೆಗಳನ್ನು ಒಡೆದುಹಾಕಲಿಕ್ಕಿದ್ದನು. ಪುನಃ ಮತ್ತೊಮ್ಮೆ ಪೌಲನು ಬರುತ್ತಾನೆ; ಈ ಸಲ ಎರಡು ಕೊಡುಗೆಗಳೊಂದಿಗೆ - ಅನ್ಯ ಕ್ರೈಸ್ತರ ಕಾಣಿಕೆಗಳು ಮತ್ತು ಈ ಕಾಣಿಕೆಯನ್ನು ಪ್ರೇರೇಪಿಸಿದ ದೇವರ ಕೃಪೆಯ ಸುವಾರ್ತೆ. ಅವರು ಅವನನ್ನು ಹೇಗೆ ಸ್ವೀಕರಿಸುವರು? ಯೆರೂಸಲೇಮ ಸಭೆಯ ನಾಯಕರು, ಯಾಕೋಬನ ಅಧೀನತೆಯಲ್ಲಿ, ಅವನಿಗೆ ಆದಾರದ ಸ್ವಾಗತ ದಯಪಾಲಿಸಿದರು. ಆದರೆ ಅಲ್ಲಿ ಅವನು ಪ್ರತಿಯೊಂದು ಕಡೆಯಲ್ಲಿಯಂತೆ ಸುಳ್ಳು ನಿಂದನೆಗೆ ಗುರಿಯಾಗಿದ್ದನು. ತಪ್ಪಾಭಿಪ್ರಾಯವನ್ನು ತೆಗೆದು ಹಾಕಲು ಯಾಕೋಬನ ಬುದ್ಧಿವಾದಕ್ಕೆ ಒಳಪಟ್ಟನು ಮತ್ತು ಹರಕೆಯೊಂದಿಗೆ ಸಂಬಂಧಿಸಿದ ಕೆಲವು ಧಾರ್ಮಿಕ ವಿಧಿಗಳನ್ನು ಕೈಕೊಳ್ಳಲು ಒಪ್ಪಿಕೊಂಡನು. ಸಭೆಯೊಂದಿಗೆ ಅದು ಹೇಗೆ ಯಶಸ್ಸುಗೊಂಡಿತು ಎಂದು ಲೂಕನು ಹೇಳುವದಿಲ್ಲ. ಅವಿಶ್ವಾಸಿ ಯೆಹೂದ್ಯರೊಂದಿಗೆ ಅದು ಸೋತು ಹೋಯಿತು. ಮತ್ತು ಅವನು ತಾನೇ ಸ್ತೆಫನನ ಕೊಲೆಗೆ ನಾಯಕನಾಗಿದ್ದಂಥ ಜನ ಸಮೂಹದಿಂದ ಬೇಗನೇ ದೇವಾಲಯದಲ್ಲಿ ಹಿಡಿಯಲ್ಪಟ್ಟನು.

---

ಟಿಪ್ಪಣಿಗಳು

[1]ಅಪೊಸ್ತಲರ ಕೃತ್ಯಗಳು 13:2. [2]ಅಪೊಸ್ತಲರ ಕೃತ್ಯಗಳು 16:9. [3]ಅಪೊಸ್ತಲರ ಕೃತ್ಯಗಳು 17:2. [4]ಟೈಟಸ್ ಫ್ಲೇವಿಯಸ್ ವೆಸ್ಪಾಸಿಯಸ್‌ನು ರೋಮಿನ ಚಕ್ರವರ್ತಿಯಾಗಿದ್ದನು.

© 2009 Truth for Today